IslamHouse.com

# ಪ್ರಾರ್ಥನೆಯ ಶಿಷ್ಟಾಚಾರಗಳು

آداب الدعاء

< الكنادي >

ಮಜ್ದಿ ಇಬ್ನ್ ಅಬ್ದುಲ್ ವಹ್ಹಾಬ್ ಅಹ್ಮದ್

ಅನುವಾದ: ಮುಹಮ್ಮದ್ ಹಂಝ ಪುತ್ತೂರು

ಪರಿಶೀಲನೆ: ಅಬ್ದುಸ್ಸಲಾಂ ಕಾಟಿಪಳ್ಳ

IslamHouse.com

# آداب الدعاء

مجدي بن عبد الوهاب أحمد

ترجمة: محمد حمزة البتوري

مراجعة: عبد السلام كاتيبلا

# ಪ್ರಾರ್ಥನೆಯ ಶಿಷ್ಟಾಚಾರಗಳು

ಪ್ರಾರ್ಥನೆಗೆ ಇಸ್ಲಾಂ ನಿಶ್ಚಯಿಸಿದಂತಹ ಕೆಲವು ಶಿಷ್ಟಾಚಾರಗಳು ಮತ್ತು ನಿಯಮಗಳು ಹೀಗಿವೆ:

1. ಪ್ರವಾದಿಗಳು, ಸಂದೇಶವಾಹಕರು, ಔಲಿಯಾಗಳು ಸಜ್ಜನರು ಮುಂತಾದವರ ಜೀವನಚರ್ಯೆಯನ್ನು ನೋಡಿ ಅವರು ಹೇಗೆ ಪ್ರಾರ್ಥಿಸುತ್ತಿದ್ದರೆಂದು ತಿಳಿಯುವುದು.

ಪ್ರವಾದಿಗಳಲ್ಲಿ ಮತ್ತು ಸಜ್ಜನರಲ್ಲಿ ಯಾರಿಗಾದರೂ ಅಲ್ಲಾಹನೊಡನೆ ಏನಾದರೂ ಬೇಡಬೇಕಾಗಿ ಬಂದರೆ, ಅವರು ತಮ್ಮ ಅಂಗೈಗಳನ್ನೆತ್ತುತ್ತಿದ್ದರು. ಕೆನ್ನೆಗಳಲ್ಲಿ ಕಣ್ಣೀರು ಹರಿಸುತ್ತಿದ್ದರು. ನಂತರ ಅವರು ಮೊದಲು ತಮ್ಮ ಪಾಪಗಳಿಗೆ ಕ್ಷಮೆ ಬೇಡುತ್ತಿದ್ದರು. ನಿಷಿದ್ಧ ವಿಷಯಗಳಿಂದ ದೂರವಾಗುತ್ತಿದ್ದರು. ಹೃದಯದಲ್ಲಿ ಭಯವನ್ನು ತುಂಬಿಕೊಳ್ಳುತ್ತಿದ್ದರು. ದೈನ್ಯತೆಯನ್ನು ಪ್ರಕಟಿಸುತ್ತಿದ್ದರು. ವಿನಮ್ರರಾಗುತ್ತಿದ್ದರು.

ಅಲ್ಲಾಹನನ್ನು ಸ್ತುತಿಸುವ ಮೂಲಕ, ಅವನನ್ನು ಪವಿತ್ರ ಎನ್ನುವ ಮೂಲಕ, ಅವನನ್ನು ಅನ್ಯೂನನೆಂದು ಪ್ರಶಂಸಿಸುವ ಮೂಲಕ, ಅವನಿಗೆ ಗೌರವಾದರ ಸಲ್ಲಿಸುವ ಮೂಲಕ, ಅವನಿಗೆ ಅರ್ಹವಾದ ಸ್ತುತಿ ಪ್ರಶಂಸೆಗಳೊಂದಿಗೆ ಅವನನ್ನು ಸ್ತುತಿಸುವ ಮೂಲಕ ಅವರು ತಮ್ಮ ಪ್ರಾರ್ಥನೆಯನ್ನು ಆರಂಭಿಸುತ್ತಿದ್ದರು.

ಉದಾಹರಣೆಗೆ, ಖಲೀಲುಲ್ಲಾಹಿ ಇಬ್ರಾಹೀಂ(ﷺ)ರನ್ನೇ ನೋಡಿ. ಅವರು ತಮ್ಮ ಉದ್ದೇಶ ಸಿದ್ಧಿಗಾಗಿ ಅಲ್ಲಾಹನಲ್ಲಿ ಪ್ರಾರ್ಥಿಸಲು

ಬಯಸಿದಾಗ, ಅಲ್ಲಾಹನನ್ನು ಪ್ರಶಂಸಿಸುವ ಮೂಲಕ ತಮ್ಮ ಪ್ರಾರ್ಥನೆಯನ್ನು ಆರಂಭಿಸಿದರು:

﴿ٱلَّذِى خَلَقَنِى فَهُوَ يَهۡدِينِ ۝٧٨ وَٱلَّذِى هُوَ يُطۡعِمُنِى وَيَسۡقِينِ ۝٧٩ وَإِذَا مَرِضۡتُ فَهُوَ يَشۡفِينِ ۝٨٠ وَٱلَّذِى يُمِيتُنِى ثُمَّ يُحۡيِينِ ۝٨١ وَٱلَّذِىٓ أَطۡمَعُ أَن يَغۡفِرَ لِى خَطِيٓـَٔتِى يَوۡمَ ٱلدِّينِ ۝٨٢﴾ [الشعراء: 78–82].

“ನನ್ನನ್ನು ಸೃಷ್ಟಿಸಿದವನು ಯಾರೋ ಅವನು ನನಗೆ ಮಾರ್ಗದರ್ಶನ ನೀಡುವನು. ಅವನೇ ನನಗೆ ತಿನ್ನಲು ಮತ್ತು ಕುಡಿಯಲು ನೀಡುವನು. ನಾನು ಕಾಯಿಲೆ ಬಿದ್ದರೆ ಅವನೇ ನನ್ನನ್ನು ಗುಣಪಡಿಸುವನು. ಅವನೇ ನನ್ನನ್ನು ಮೃತಪಡಿಸುವನು ಮತ್ತು ಪುನಃ ನನಗೆ ಜೀವವನ್ನು ನೀಡುವನು. ಪ್ರತಿಫಲ ದಿನದಲ್ಲಿ ನನ್ನ ಪಾಪಗಳನ್ನು ಕ್ಷಮಿಸುವನೆಂದು ನಾನು ನಿರೀಕ್ಷೆಯನ್ನಿಟ್ಟುಕೊಂಡಿರುವವನು.” [ಕುರ್‌ಆನ್ 26:78–82]

ಇಲ್ಲಿ ಖಲೀಲುಲ್ಲಾಹಿ ಇಬ್ರಾಹೀಂ(ﷺ)ರು ಐದು ರೀತಿಯ ಪ್ರಶಂಸೆಗಳ ಮೂಲಕ ಅಲ್ಲಾಹನನ್ನು ಪ್ರಶಂಸಿಸುತ್ತಾರೆ. ಸೃಷ್ಟಿಕರ್ತ ಮತ್ತು ಸನ್ಮಾರ್ಗದರ್ಶಕ ಎಂಬ ಪ್ರಶಂಸೆ, ಅನ್ನ ಪಾನೀಯ ನೀಡುವವನೆಂಬ ಪ್ರಶಂಸೆ, ಕಾಯಿಲೆಗಳನ್ನು ಗುಣಪಡಿಸುವವನೆಂಬ ಪ್ರಶಂಸೆ, ಜೀವ ಮತ್ತು ಮರಣ ನೀಡುವವನೆಂಬ ಪ್ರಶಂಸೆ, ಪಾಪಗಳನ್ನು ಕ್ಷಮಿಸುವವನೆಂಬ ಪ್ರಶಂಸೆ.

ಹೀಗೆ ಐದು ರೀತಿಯ ಪ್ರಶಂಸೆಗಳ ಮೂಲಕ ಪ್ರಶಂಸಿಸಿದ ನಂತರ ಅವರು ಅಲ್ಲಾಹನ ಮುಂದೆ ತಮ್ಮ ಐದು ಬೇಡಿಕೆಗಳನ್ನು ಇಡುತ್ತಾರೆ:

﴿رَبِّ هَبۡ لِي حُكۡمٗا وَأَلۡحِقۡنِي بِٱلصَّٰلِحِينَ ٨٣ وَٱجۡعَل لِّي لِسَانَ صِدۡقٖ فِي ٱلۡأٓخِرِينَ ٨٤ وَٱجۡعَلۡنِي مِن وَرَثَةِ جَنَّةِ ٱلنَّعِيمِ ٨٥ وَٱغۡفِرۡ لِأَبِيٓ إِنَّهُۥ كَانَ مِنَ ٱلضَّآلِّينَ ٨٦ وَلَا تُخۡزِنِي يَوۡمَ يُبۡعَثُونَ ٨٧﴾ [الشعراء: 83-87].

"ಓ ನನ್ನ ರಬ್ಬೇ! ನನಗೆ ಜ್ಞಾನವನ್ನು ಕರುಣಿಸು ಮತ್ತು ನನ್ನನ್ನು ಸಜ್ಜನರೊಡನೆ ಸೇರಿಸು. ನನ್ನ ನಂತರದ ತಲೆಮಾರುಗಳಲ್ಲಿ ನನ್ನ ಹೆಸರು ಉಳಿಯುವಂತೆ ಮಾಡು. ಅನುಗ್ರಹಪೂರ್ಣ ಸ್ವರ್ಗದ ಉತ್ತರಾಧಿಕಾರಿಗಳಲ್ಲಿ ನನ್ನನ್ನು ಸೇರಿಸು. ನನ್ನ ತಂದೆಗೆ ಕ್ಷಮಿಸು. ಅವರು ಪಥಭ್ರಷ್ಟರಲ್ಲಿ ಸೇರಿಹೋಗಿದ್ದಾರೆ. ಜನರನ್ನು ಪುನರುತ್ಥಾನಗೊಳಿಸುವ ದಿನದಲ್ಲಿ ನನಗೆ ಅಪಮಾನ ಮಾಡದಿರು." [ಕುರ್‌ಆನ್ 26:83–87]

ಪ್ರವಾದಿ ಇಬ್ರಾಹೀಂ(عليه السلام) ಮುಂದಿಟ್ಟ ಈ ಐದು ಬೇಡಿಕೆಗಳಲ್ಲಿ ಒಂದನ್ನು ಬಿಟ್ಟು ಉಳಿದ ನಾಲ್ಕು ಬೇಡಿಕೆಗಳನ್ನು ಅಲ್ಲಾಹು ಈಡೇರಿಸಿದ್ದಾನೆ. ಮೊದಲನೆಯ ಬೇಡಿಕೆಯ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿فَقَدۡ ءَاتَيۡنَآ ءَالَ إِبۡرَٰهِيمَ ٱلۡكِتَٰبَ وَٱلۡحِكۡمَةَ﴾ [النساء: 54].

"ನಾವು ಇಬ್ರಾಹೀಮರ ಕುಟುಂಬಕ್ಕೆ ಗ್ರಂಥವನ್ನು ಮತ್ತು ಜ್ಞಾನವನ್ನು ಕರುಣಿಸಿದ್ದೇವೆ." [ಕುರ್‌ಆನ್ 4:54]

ಎರಡನೆಯ ಬೇಡಿಕೆಯ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿وَإِنَّهُۥ فِي ٱلۡأٓخِرَةِ لَمِنَ ٱلصَّٰلِحِينَ ١٣٠﴾ [البقرة: 130].

"ಖಂಡಿತವಾಗಿಯೂ ಪರಲೋಕದಲ್ಲಿ ಅವರು ಸಜ್ಜನರಲ್ಲಿ ಸೇರಿದವರಾಗಿರುವರು." [ಕುರ್‌ಆನ್ 2:130]

ಮೂರನೆಯ ಬೇಡಿಕೆ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿وَتَرَكۡنَا عَلَيۡهِ فِي ٱلۡأٓخِرِينَ ١٠٨﴾ [الصافات: 108] .

"ನಾವು ನಂತರದ ತಲೆಮಾರುಗಳಲ್ಲಿ ಅವರ ಹೆಸರು ಉಳಿಯುವಂತೆ ಮಾಡಿದೆವು." [ಕುರ್‌ಆನ್ 37:108]

ನಾಲ್ಕನೆ ಬೇಡಿಕೆ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿رَحۡمَتُ ٱللَّهِ وَبَرَكَٰتُهُۥ عَلَيۡكُمۡ أَهۡلَ ٱلۡبَيۡتِۚ﴾ [هود: 73] .

"ಓ ಕುಟುಂಬದವರೇ! ನಿಮ್ಮ ಮೇಲೆ ಅಲ್ಲಾಹನ ಕರುಣೆ ಮತ್ತು ಬರಕತ್ ಇದೆ." [ಕುರ್‌ಆನ್ 11:73]

ಆದರೆ ಐದನೆ ಬೇಡಿಕೆಯನ್ನು ಅಲ್ಲಾಹು ಈಡೇರಿಸುವುದಿಲ್ಲ. ಬದಲಾಗಿ ಅಲ್ಲಾಹು ಹೇಳುತ್ತಾನೆ:

﴿فَلَمَّا تَبَيَّنَ لَهُۥٓ أَنَّهُۥ عَدُوّٞ لِّلَّهِ تَبَرَّأَ مِنۡهُۚ﴾ [التوبة: 114] .

"ತಮ್ಮ ತಂದೆ ಅಲ್ಲಾಹನ ಶತ್ರುವೆಂದು ಸ್ಪಷ್ಟವಾದಾಗ ಅವರು (ಇಬ್ರಾಹೀಮರು) ತಂದೆಯಿಂದ ದೂರವಾದರು." [ಕುರ್‌ಆನ್ 9:114]

ಅಲ್ಲಾಹು ಸೂರಃ ಅಲ್‌ಫಾತಿಹಃವನ್ನು ಅವತೀರ್ಣಗೊಳಿಸಿದ್ದು ಇದೇ ರೂಪದಲ್ಲಿ. ಅದರ ಮೊದಲು ಭಾಗವು, ಅಂದರೆ 'ಇಯ್ಯಾಕ ನಸ್ತಈನ್'

ಎಂಬಲ್ಲಿಯವರೆಗೆ ಅಲ್ಲಾಹನ ಪ್ರಶಂಸೆಯೂ ಅದರ ನಂತರದ್ದು ಅಲ್ಲಾಹನೊಂದಿಗಿರುವ ಬೇಡಿಕೆಯೂ ಆಗಿದೆ.

ಪ್ರವಾದಿ ಮೂಸಾ(ﷺ)ರು ಅಲ್ಲಾಹನಲ್ಲಿ ಇದೇ ರೀತಿ ಪ್ರಾರ್ಥಿಸಿದರು:

﴿أَنتَ وَلِيُّنَا فَٱغۡفِرۡ لَنَا وَٱرۡحَمۡنَاۖ﴾ [الأعراف: 155] .

“ನೀನೇ ನಮ್ಮ ರಕ್ಷಕ. ಆದುದರಿಂದ ನಮ್ಮನ್ನು ಕ್ಷಮಿಸು ಮತ್ತು ನಮ್ಮ ಮೇಲೆ ದಯೆತೋರು.” [ಕುರ್‌ಆನ್ 7:155] ನೀನೇ ನಮ್ಮ ರಕ್ಷಕ ಎಂದು ಅಲ್ಲಾಹನನ್ನು ಹೊಗಳಿದ ಬಳಿಕ ಅವರು ತಮ್ಮ ಬೇಡಿಕೆಯನ್ನಿಡುತ್ತಾರೆ.

ಇಮಾಂ ಅಲ್‌ಬುಖಾರಿ ವರದಿ ಮಾಡಿದ ಶಫಾಅತ್ತಿನ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

“ಅಂತ್ಯದಿನದಂದು ಸೃಷ್ಟಿಗಳೆಲ್ಲರೂ ಅಂಬಿಯಾಗಳ ಬಳಿಗೆ ತೆರಳಿ ಅಲ್ಲಾಹನ ಬಳಿ ತಮಗೆ ಶಫಾಅತ್ ಮಾಡಬೇಕೆಂದು ವಿನಂತಿಸುವರು. ಆಗ ಅವರೆಲ್ಲರೂ ತಮ್ಮ ತಪ್ಪನ್ನು ನೆನೆದು, ಬೇರೆ ಪ್ರವಾದಿಗಳ ಕಡೆಗೆ ಕಳುಹಿಸುವರು. ಕೊನೆಗೆ ಸೃಷ್ಟಿಗಳೆಲ್ಲರೂ ನನ್ನ ಬಳಿ ಬಂದಾಗ, “ನಾನು ಶಫಾಅತ್ ಮಾಡುವೆನು” ಎಂದು ನಾನು ಹೇಳುವೆನು. ಹೀಗೆ ನಾನು ಅಲ್ಲಾಹನೊಡನೆ ಶಫಾಅತ್ ಮಾಡುವುದಕ್ಕಾಗಿ ಅನುಮತಿ ಕೇಳುವೆನು. ಅವನನ್ನು ಕಂಡ ತಕ್ಷಣ ನಾನು ಸಾಷ್ಟಾಂಗ ಬೀಳುವೆನು. ಹೀಗೆ ಅವನಿಚ್ಛಿಸುವ ಸಮಯದ ತನಕ ನಾನು ಸಾಷ್ಟಾಂಗದಲ್ಲೇ ಇರುವೆನು. ನಂತರ ಅವನು ಹೇಳುವನು: “(ಓ ಪ್ರವಾದಿಯವರೇ), ತಲೆಯೆತ್ತಿರಿ. ತಮಗೇನು ಬೇಕೋ ಕೇಳಿರಿ; ನಾನದನ್ನು ಕೊಡುವೆನು. ತಾವು

ಮಾತನಾಡಿರಿ; ನಾನು ತಮ್ಮ ಮಾತನ್ನು ಕೇಳುವೆನು. ತಾವು ಶಫಾಅತ್ ಮಾಡಿರಿ; ನಾನು ತಮ್ಮ ಶಫಾಅತ್ತನ್ನು ಸ್ವೀಕರಿಸುವೆನು." ನಂತರ ನಾನು ಅವನನ್ನು ಪ್ರಶಂಸಿಸುವುದಕ್ಕಾಗಿ ಅವನು ನನಗೆ ಕೆಲವು ಪ್ರಶಂಸೆಗಳನ್ನು ತೋಚಿಸಿಕೊಡುವನು. ನಾನು ಆ ಪ್ರಶಂಸೆಗಳ ಮೂಲಕ ಅವನನ್ನು ಪ್ರಶಂಸಿಸುವೆನು." [ಅಲ್‌ಬುಖಾರಿ 7510; ಮುಸ್ಲಿಂ 193]

ಇನ್ನೊಂದು ವರದಿಯಲ್ಲಿ ಹೀಗಿದೆ: "ನನ್ನ ರಬ್ಬ್ ಕಲಿಸಿಕೊಟ್ಟ ಪ್ರಶಂಸೆಗಳ ಮೂಲಕ ನಾನು ಅವನನ್ನು ಪ್ರಶಂಸಿಸುವೆನು."

ಹೀಗೆ ಪ್ರವಾದಿ(ﷺ)ರವರು ಶಫಾಅತ್ತನ್ನು ಬೇಡುವುದಕ್ಕೆ ಮುಂಚೆ ಅಲ್ಲಾಹನನ್ನು ಪ್ರಶಂಸಿಸುವರೆಂದು ಈ ಹದೀಸಿನಿಂದ ಸ್ಪಷ್ಟವಾಗುತ್ತದೆ.

ಫುದಾಲಃ ಇಬ್ನ್ ಉಬೈದ್(رضي الله عنه)ರಿಂದ ವರದಿ: "ಒಮ್ಮೆ ಒಬ್ಬ ವ್ಯಕ್ತಿ ನಮಾಝ್ ನಿರ್ವಹಿಸಿದ ಬಳಿಕ ಪ್ರಾರ್ಥಿಸುತ್ತಿರುವುದನ್ನು ಪ್ರವಾದಿ(ﷺ)ರವರು ಕೇಳಿದರು. ಆ ವ್ಯಕ್ತಿ ಅಲ್ಲಾಹನನ್ನು ಪ್ರಶಂಸಿಸುವುದಾಗಲಿ, ಪ್ರವಾದಿ(ﷺ)ರ ಮೇಲೆ ಸಲಾತ್ ಹೇಳುವುದಾಗಲಿ ಮಾಡಲಿಲ್ಲ. ಆಗ ಪ್ರವಾದಿ(ﷺ)ರವರು ಹೇಳಿದರು:

«عَجَّلَ هَذَا»

"ಈತ ಆತುರಪಟ್ಟಿದ್ದಾನೆ." ನಂತರ ಆತನನ್ನು ಕರೆದು ಆತನೊಡನೆ ಅಥವಾ ಬೇರೊಬ್ಬರೊಡನೆ ಹೇಳಿದರು:

«إِذَا صَلَّى أَحَدُكُمْ فَلْيَبْدَأْ بِتَمْجِيدِ رَبِّهِ وَالثَّنَاءِ عَلَيْهِ، ثُمَّ يُصَلِّي عَلَى النَّبِيِّ صَلَّى اللَّهُ عَلَيْهِ وَسَلَّمَ، ثُمَّ يَدْعُو بَعْدُ بِمَا شَاءَ»

“ನಿಮ್ಮಲ್ಲೊಬ್ಬರು ಪ್ರಾರ್ಥಿಸುವಾಗ ಅಲ್ಲಾಹನನ್ನು ಪ್ರಶಂಸಿಸುವ ಮೂಲಕ ಆರಂಭಿಸಲಿ. ನಂತರ ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳಲಿ. ಅದರ ನಂತರ ತನಗೆ ಬೇಕಾದುದನ್ನು ಬೇಡಿಕೊಳ್ಳಲಿ.” [ಅಬೂದಾವೂದ್ 1481; ಅತ್ತಿರ್ಮಿದಿ 3475]

2. ಪ್ರಾರ್ಥನೆಯಲ್ಲಿ ನಿಷ್ಕಾಪಟ್ಯತೆ, ತವಕ, ಭಯ, ವಿನಮ್ರತೆ, ದೈನ್ಯತೆ ಇತ್ಯಾದಿಗಳಿರಬೇಕು. ಅಲ್ಲಾಹು ಹೇಳುತ್ತಾನೆ:

﴿إِنَّهُمْ كَانُواْ يُسَٰرِعُونَ فِي ٱلْخَيْرَٰتِ وَيَدْعُونَنَا رَغَبًا وَرَهَبًا ۖ وَكَانُواْ لَنَا خَٰشِعِينَ ۝٩٠﴾ [الأنبياء: 90] .

“ಅವರು (ಪ್ರವಾದಿಗಳು) ಸತ್ಕಾರ್ಯಗಳಲ್ಲಿ ಮುನ್ನುಗ್ಗುವವರೂ, ನಿರೀಕ್ಷೆ ಮತ್ತು ಭಯದಿಂದ ನಮ್ಮಲ್ಲಿ ಪ್ರಾರ್ಥಿಸುವವರೂ ಆಗಿದ್ದರು. ಅವರು ನಮಗೆ ವಿನಮ್ರರಾಗಿದ್ದರು.” [ಕುರ್‌ಆನ್ 21:90]

3. ಪ್ರಾರ್ಥಿಸುವಾಗ ದೃಢಚಿತ್ತದಿಂದ ಮತ್ತು ಉತ್ತರ ಸಿಗಬೇಕೆಂಬ ಉತ್ಕಟದಿಂದ ಪ್ರಾರ್ಥಿಸಬೇಕು. ಉತ್ತರ ಸಿಕ್ಕರೆ ಸಿಗಲಿ ಇಲ್ಲದಿದ್ದರೆ ಬೇಡ ಎಂಬ ರೀತಿಯಲ್ಲಿ ಪ್ರಾರ್ಥಿಸಬಾರದು. ಪ್ರವಾದಿ(ﷺ) ಹೇಳಿದರು:

«لَا يَقُولَنَّ أَحَدُكُمْ: اللَّهُمَّ اغْفِرْ لِي إِنْ شِئْتَ، اللَّهُمَّ ارْحَمْنِي إِنْ شِئْتَ، لِيَعْزِمِ الْمَسْأَلَةَ، فَإِنَّهُ لَا مُكْرِهَ لَهُ»

“ಓ ಅಲ್ಲಾಹ್! ನಿನಗಿಷ್ಟವಿದ್ದರೆ ನನ್ನನ್ನು ಕ್ಷಮಿಸು. ಓ ಅಲ್ಲಾಹ್! ನಿನಗಿಷ್ಟವಿದ್ದರೆ ನನಗೆ ದಯೆ ತೋರು ಎಂದು ನಿಮ್ಮಲ್ಲಿ ಯಾರೂ ಪ್ರಾರ್ಥಿಸಬಾರದು. ಬದಲಾಗಿ ದೃಢಚಿತ್ತದಿಂದ ಬೇಡಬೇಕು. ಕಾರಣ,

ಅಲ್ಲಾಹನನ್ನು ಬಲವಂತಪಡಿಸುವವರಾರೂ ಇಲ್ಲ.” [ಅಲ್‌ಬುಖಾರಿ 6339 ಮತ್ತು ಮುಸ್ಲಿಂ 2679]

ಪ್ರವಾದಿ(ﷺ) ಹೇಳಿದರು:

«إِذَا دَعَا أَحَدُكُمْ فَلْيَعْزِمِ الْمَسْأَلَةَ، وَلَا يَقُولَنَّ: اللَّهُمَّ إِنْ شِئْتَ فَأَعْطِنِي، فَإِنَّهُ لَا مُسْتَكْرِهَ لَهُ»

“ನಿಮ್ಮಲ್ಲೊಬ್ಬನು ಪ್ರಾರ್ಥಿಸುವಾಗ ದೃಢಚಿತ್ತದಿಂದ ಪ್ರಾರ್ಥಿಸಲಿ. ಓ ಅಲ್ಲಾಹ್! ನಿನಗಿಷ್ಟವಿದ್ದರೆ ನಾನು ಬೇಡಿದ್ದನ್ನು ಕೊಡು ಎಂದು ನೀವು ಹೇಳಬಾರದು. ಕಾರಣ, ಅಲ್ಲಾಹನನ್ನು ಬಲವಂತ ಪಡಿಸುವವರಾರೂ ಇಲ್ಲ.” [ಅಲ್‌ಬುಖಾರಿ 6338 ಮತ್ತು ಮುಸ್ಲಿಂ 2678]

ಇನ್ನೊಂದು ವರದಿಯಲ್ಲಿ ಹೀಗಿದೆ:

«فَإِنَّ اللَّهَ لَا يَتَعَاظَمُهُ شَيْءٌ أَعْطَاهُ»

“ಅಲ್ಲಾಹನಿಗೆ ಸಂಬಂಧಿಸಿದಂತೆ ಕೊಡಲಾಗದಷ್ಟು ದೊಡ್ಡ ವಸ್ತು ಯಾವುದೂ ಇಲ್ಲ.”

4. ಅಲ್ಲಾಹನಲ್ಲಿ ಬಲವಾದ ನಿರೀಕ್ಷೆಯನ್ನಿಟ್ಟು ಪ್ರಾರ್ಥಿಸಬೇಕು. ಅಲ್ಲಾಹನ ಕರುಣೆಯ ಬಗ್ಗೆ ನಿರಾಶೆಪಡಬಾರದು. ಉತ್ತರ ಸಿಗುವುದು ತಡವಾದರೆ ಪ್ರಾರ್ಥಿಸುವುದನ್ನು ಬಿಟ್ಟುಬಿಡಬಾರದು. ಕಾರಣ, ಪ್ರತಿಯೊಂದಕ್ಕೂ ಒಂದು ಅವಧಿಯಿದೆ. ಪ್ರವಾದಿ(ﷺ) ಹೇಳಿದರು:

«يُسْتَجَابُ لِأَحَدِكُمْ مَا لَمْ يَعْجَلْ فَيَقُولُ قَدْ دَعَوْتُ فَلَمْ يُسْتَجَبْ لِي»

“ನಿಮ್ಮಲ್ಲೊಬ್ಬನ ಪ್ರಾರ್ಥನೆಗೆ, ಅವನು ಆತುರಪಟ್ಟು ನಾನು ಎಷ್ಟೊಂದು ಪ್ರಾರ್ಥಿಸಿದೆ, ಆದರೆ ನನಗೆ ಉತ್ತರ ಸಿಗಲೇ ಇಲ್ಲ ಎಂದು ಹೇಳುವ ತನಕ ಉತ್ತರ ಸಿಗದೆ ಇರದು.” [ಅಲ್‌ಬುಖಾರಿ 6340 ಮತ್ತು ಮುಸ್ಲಿಂ 2735]

5. ತನಗೆ ಮಾತ್ರವಲ್ಲದೆ ಇತರ ವಿಶ್ವಾಸಿ ವಿಶ್ವಾಸಿನಿಯರಿಗೂ ಪ್ರಾರ್ಥಿಸಬೇಕು. ಅಲ್ಲಾಹು ಹೇಳುತ್ತಾನೆ:

﴿وَٱسۡتَغۡفِرۡ لِذَنۢبِكَ وَلِلۡمُؤۡمِنِينَ وَٱلۡمُؤۡمِنَٰتِۗ﴾ [محمد: 19].

“ತಮ್ಮ ಪಾಪಕ್ಕೆ ಮತ್ತು ವಿಶ್ವಾಸಿಗಳ ಹಾಗೂ ವಿಶ್ವಾಸಿನಿಗಳ ಪಾಪಗಳಿಗೆ ಕ್ಷಮೆಯನ್ನು ಬೇಡಿರಿ.” [ಕುರ್‌ಆನ್ 47:19]

6. ಅಲ್ಲಾಹನನ್ನು ಏಕೈಕಗೊಳಿಸುವ ಮೂಲಕ ಪ್ರಾರ್ಥಿಸಬೇಕು. ದುನ್ನೂನ್ [ಪ್ರವಾದಿ ಯೂನುಸ್(ﷺ)] ಪ್ರಾರ್ಥಿಸಿದಂತೆ:

﴿فَنَادَىٰ فِي ٱلظُّلُمَٰتِ أَن لَّآ إِلَٰهَ إِلَّآ أَنتَ سُبۡحَٰنَكَ إِنِّي كُنتُ مِنَ ٱلظَّٰلِمِينَ ٨٧﴾ [الأنبياء: 87].

“ಆಗ ಅವರು ಆ ಅಂಧಕಾರದಲ್ಲಿ, ನಿನ್ನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ; ನೀನು ಸರ್ವನ್ಯೂನತೆಗಳಿಂದಲೂ ಪರಿಶುದ್ಧನು; ಖಂಡಿತವಾಗಿಯೂ ನಾನು ಅನ್ಯಾಯಕಾರರಲ್ಲಿ ಸೇರಿದವನಾಗಿದ್ದೆ ಎಂದು ಪ್ರಾರ್ಥಿಸಿದರು.” [ಕುರ್‌ಆನ್ 21:87]

ಪ್ರವಾದಿ ಯೂನುಸ್(ﷺ)ರು ತಮ್ಮ ಪ್ರಾರ್ಥನೆಯಲ್ಲಿ ಮೊದಲು ಅಲ್ಲಾಹನ ಏಕತೆಯನ್ನು (ತೌಹೀದ್) ಘೋಷಿಸಿದರು. ನಂತರ

ಅಲ್ಲಾಹನನ್ನು ಸರ್ವ ನ್ಯೂನತೆಗಳಿಂದಲೂ ಮುಕ್ತಗೊಳಿಸಿದರು. ಆ ಬಳಿಕ ತಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಾ, ತಮ್ಮ ದೇಹವನ್ನು ಅಲ್ಲಾಹನಿಗೆ ಶರಣಾಗಿಸಿದರು.

7. ಮೌನವಾಗಿ ಪ್ರಾರ್ಥಿಸಬೇಕು. ಪ್ರಾರ್ಥನೆ ಅಲ್ಲಾಹನ ಹೊರತು ಇನ್ನಾರೂ ಕೇಳುವಂತಿರದಿರಬಾರದು. ಅಲ್ಲಾಹು ಹೇಳುತ್ತಾನೆ:

﴿ٱدۡعُواْ رَبَّكُمۡ تَضَرُّعٗا وَخُفۡيَةًۚ إ﴾ [الأعراف: 55] .

“ವಿನಮ್ರತೆ ಮತ್ತು ಗೌಪ್ಯತೆಯಿಂದ ತಾವು ತಮ್ಮ ರಬ್ಬನ್ನು ಕರೆದು ಪ್ರಾರ್ಥಿಸಿರಿ.” [ಕುರ್‌ಆನ್ 7:55]

ಅಲ್‌ಹಸನ್ ಅಲ್‌ಬಸ್ರೀ(ﷺ) ಹೇಳುತ್ತಾರೆ:

كَانَ الْمُسْلِمُونَ يَجْتَهِدُونَ فِي الدُّعَاءِ، وَلَا يُسْمَعُ لَهُمْ صَوْتٌ، إِنْ كَانَ إِلَّا هَمْسًا فِيمَا بَيْنَهُمْ وَبَيْنَ رَبِّهِمْ.

“ಮುಸ್ಲಿಮರು ಅತಿಯಾಗಿ ಪ್ರಾರ್ಥಿಸುತ್ತಿದ್ದರು. ಆದರೂ ಅವರು ಪ್ರಾರ್ಥಿಸುವಾಗ ಧ್ವನಿಯು ಕೇಳಿಸುತ್ತಿರಲಿಲ್ಲ. ಅದು ಅವರ ಮತ್ತು ಅವರ ರಬ್ಬಿನ ನಡುವೆಯಿರುವ ಪಿಸುಗುಡುವಿಕೆ ಮಾತ್ರವಾಗಿತ್ತು.”

8. ಅಲ್ಲಾಹನೊಡನೆ ಏನಾದರೂ ಬೇಡುವಾಗ ವಿನಮ್ರತೆ ಮತ್ತು ದೈನ್ಯತೆಯಿಂದ ಬೇಡಬೇಕು. ಬಲ, ಪರಾಕ್ರಮ ಮುಂತಾದವುಗಳನ್ನು ಪ್ರದರ್ಶಿಸುತ್ತಾ ಬೇಡಬಾರದು. ಏನೂ ಮಾಡಲು ಸಾಮರ್ಥ್ಯವಿಲ್ಲದ ಅಸಹಾಯಕನಂತೆ ಅಲ್ಲಾಹನಲ್ಲಿ ಪ್ರಾರ್ಥಿಸಬೇಕು. ಯೂಸುಫ್(ﷺ) ಪ್ರಾರ್ಥಿಸುವುದನ್ನು ನೋಡಿರಿ:

﴿قَالَ رَبِّ ٱلسِّجۡنُ أَحَبُّ إِلَيَّ مِمَّا يَدۡعُونَنِيٓ إِلَيۡهِۖ وَإِلَّا تَصۡرِفۡ عَنِّي كَيۡدَهُنَّ أَصۡبُ إِلَيۡهِنَّ وَأَكُن مِّنَ ٱلۡجَٰهِلِينَ ٣٣ فَٱسۡتَجَابَ لَهُۥ رَبُّهُۥ فَصَرَفَ عَنۡهُ كَيۡدَهُنَّۚ إِنَّهُۥ هُوَ ٱلسَّمِيعُ ٱلۡعَلِيمُ ٣٤﴾ [يوسف: 33-34].

"ಅವರು (ಯೂಸುಫ್) ಹೇಳಿದರು: ಓ ನನ್ನ ರಬ್ಬೇ! ಇವರು ನನ್ನನ್ನು ಯಾವುದರ ಕಡೆಗೆ ಕರೆಯುತ್ತಿರುವರೋ ಅದಕ್ಕಿಂತಲೂ ಈ ಸೆರೆಮನೆಯೇ ನನಗೆ ಇಷ್ಟ. ಇವರು ಮಾಡುವ ಸಂಚುಗಳನ್ನು ನೀನು ನನ್ನಿಂದ ತಿರುಗಿಸಿಬಿಡದಿದ್ದರೆ ನಾನು ಇವರ ಕಡೆಗೆ ವಾಲಿ ಬಿಡುವೆನು ಮತ್ತು ಅವಿವೇಕಿಗಳಲ್ಲಿ ಸೇರಿದವನಾಗುವೆನು. ಆಗ ಅವರ ರಬ್ಬ್ ಅವರಿಗೆ ಉತ್ತರ ನೀಡಿದನು, ಮತ್ತು ಅವರ ಸಂಚುಗಳನ್ನು ಅವರಿಂದ (ಯೂಸುಫ್‌ರಿಂದ) ತಿರುಗಿಸಿಬಿಟ್ಟನು. ಖಂಡಿತವಾಗಿಯೂ ಅವನು ಎಲ್ಲವನ್ನೂ ಆಲಿಸುವವನೂ, ಅರಿಯುವವನೂ ಆಗಿದ್ದಾನೆ." [ಕುರ್‌ಆನ್ 12:33–34]

ಯೂಸುಫ್‌ರವರು ಸಂಪೂರ್ಣವಾಗಿ ತಮ್ಮ ಅಸಹಾಯಕತೆ ಯನ್ನು ಪ್ರಕಟಿಸಿದರು. ತನ್ನಲ್ಲಿ ಯಾವುದೇ ಶಕ್ತಿ ಸಾಮರ್ಥ್ಯವಿಲ್ಲ, ಇವರ ಸಂಚನ್ನು ನುಚ್ಚುನೂರು ಮಾಡಲು ನನ್ನಿಂದ ಸಾಧ್ಯವಿಲ್ಲ ಎನ್ನುತ್ತಾ ವಿಷಯವನ್ನು ಅಲ್ಲಾಹನ ಮೇಲೆ ಅರ್ಪಿಸಿದರು.

9. ಪ್ರಾರ್ಥಿಸುವಾಗ ಕಿಬ್ಲದ ಕಡೆಗೆ ತಿರುಗಿ ಕುಳಿತು, ತಲೆ ತಗ್ಗಿಸಿ, ವಿನಮ್ರತೆಯಿಂದ ವಿನೀತವಾಗಿ ಪ್ರಾರ್ಥಿಸಬೇಕು. ಇದಲ್ಲದ ಬೇರೆ ರೂಪದಲ್ಲಿ ಪ್ರಾರ್ಥಿಸಿದರೂ ಅದರಲ್ಲಿ ತಪ್ಪಿಲ್ಲ. ಕಾರಣ ಅಲ್ಲಾಹು ಹೇಳುತ್ತಾನೆ:

﴿إِنَّ فِي خَلْقِ ٱلسَّمَٰوَٰتِ وَٱلْأَرْضِ وَٱخْتِلَٰفِ ٱلَّيْلِ وَٱلنَّهَارِ لَءَايَٰتٍ لِّأُو۟لِى ٱلْأَلْبَٰبِ ۝١٩٠ ٱلَّذِينَ يَذْكُرُونَ ٱللَّهَ قِيَٰمًا وَقُعُودًا وَعَلَىٰ جُنُوبِهِمْ﴾ [آل عمران: 190-191] .

"ಖಂಡಿತವಾಗಿಯೂ ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲಿ, ರಾತ್ರಿ ಹಗಲುಗಳ ಬದಲಾವಣೆಯಲ್ಲಿ, ಬುದ್ಧಿವಂತರಿಗೆ ದೃಷ್ಟಾಂತ ಗಳಿವೆ. ಅಂದರೆ ನಿಂತುಕೊಂಡು, ಕುಳಿತುಕೊಂಡು ಮತ್ತು ಮಲಗಿಕೊಂಡು ಅಲ್ಲಾಹನನ್ನು ಸ್ಮರಿಸುವವರು..." [ಕುರ್‌ಆನ್ 3:190–191]

10. ಬೇಡಿದ್ದು ಸಿಗಲೇಬೇಕೆಂದು ಪಟ್ಟುಹಿಡಿದು ಪ್ರಾರ್ಥಿಸಬೇಕು. ಅಬ್ದುಲ್ಲಾಹ್ ಇಬ್ನ್ ಮಸ್‌ಊದ್(ﷺ) ಹೇಳುತ್ತಾರೆ: "ಒಮ್ಮೆ ಪ್ರವಾದಿ(ﷺ)ರವರು ಕಅ್‌ಬಾಲಯದ ಬಳಿ ನಮಾಝ್ ಮಾಡುತ್ತಿದ್ದರು. ಆಗ ಅಲ್ಲಿ ಅಬೂ ಜಹಲ್ ಮತ್ತು ಅವನ ಸಂಗಡಿಗರು ಕುಳಿತಿದ್ದರು. ಅವರಲ್ಲೊಬ್ಬ ಹೇಳಿದನು: ಇಂತಿಂಹವನು ಕೊಯ್ದ ಒಂಟೆಯ ಕರುಳನ್ನು ತಂದು ಮುಹಮ್ಮದ್ ಸುಜೂದ್ ಮಾಡುವಾಗ ಅವರ ಕೊರಳ ಮೇಲೆ ಹಾಕಲು ನಿಮ್ಮಲ್ಲಿ ಯಾರು ಸಿದ್ಧರಿದ್ದೀರಿ? ಆಗ ಅವರಲ್ಲಿರುವ ಅತಿದೊಡ್ಡ ದೌರ್ಭಾಗ್ಯವಂತ ಎದ್ದುನಿಂತು ಒಂಟೆಯ ಕರುಳನ್ನು ತಂದು ಪ್ರವಾದಿ(ﷺ)ರು ಸುಜೂದ್ ಮಾಡುವಾಗ ಅವರ ಕೊರಳು ಮತ್ತು ಹಗಲ ಮೇಲೆ ಹಾಕಿದನು. ಪ್ರವಾದಿ(ﷺ)ರಿಗೆ ತಲೆಯತ್ತಲಾಗಲಿಲ್ಲ. ಆಗ ಫಾತಿಮಾ(ﷺ) ಓಡಿಬಂದು ಅದನ್ನು ತೆಗೆದರು. ಪ್ರವಾದಿ(ﷺ)ರವರು ತಲೆಯೆತ್ತಿದರು. ನಂತರ

«اللَّهُمَّ عَلَيْكَ بِقُرَيْشٍ»

“ಓ ಅಲ್ಲಾಹ್! ಕುರೈಶರನ್ನು ನೀನೇ ನೋಡಿಕೋ” ಎಂದು ಕುರೈಶರ ವಿರುದ್ಧ ಪ್ರಾರ್ಥಿಸಿದರು. ಪ್ರವಾದಿ(ﷺ)ರು ಹೀಗೆ ಮೂರು ಬಾರಿ ಪಟ್ಟು ಹಿಡಿದು ಪ್ರಾರ್ಥಿಸಿದರು. ತಮ್ಮ ವಿರುದ್ಧ ಪ್ರಾರ್ಥಿಸಿದ್ದನ್ನು ಕಂಡು ಕುರೈಶರಿಗೆ ಭಯವಾಯಿತು. ಆ ಸ್ಥಳದಲ್ಲಿ ಪ್ರಾರ್ಥಿಸಿದರೆ ಪ್ರಾರ್ಥನೆ ಸ್ವೀಕರಿಸಲ್ಪಡುತ್ತದೆಯೆಂಬ ನಂಬಿಕೆ ಅವರಿಗಿತ್ತು. ಪ್ರವಾದಿ(ﷺ)ರು ಪುನಃ ಪ್ರಾರ್ಥಿಸಿದರು:

«اللَّهُمَّ عَلَيْكَ بِأَبِي جَهْلٍ، وَعَلَيْكَ بِعُتْبَةَ بْنِ رَبِيعَةَ، وَشَيْبَةَ بْنِ رَبِيعَةَ، وَالْوَلِيدِ بْنِ عُتْبَةَ، وَأُمَيَّةَ بْنِ خَلَفٍ، وَعُقْبَةَ بْنِ أَبِي مُعَيْطٍ».

“ಓ ಅಲ್ಲಾಹ್! ಅಬೂ ಜಹಲ್‌ನನ್ನು ನೋಡಿಕೋ. ಉತ್ಬಃ ಇಬ್ನ್ ರಬೀಅಃನನ್ನು, ಶೈಬಃ ಇಬ್ನ್ ರಬೀಅಃನನ್ನು, ಅಲ್‌ವಲೀದ್ ಇಬ್ನ್ ಉತ್ಬಃನನ್ನು, ಉಮಯ್ಯಃ ಇಬ್ನ್ ಖಲಫ್‌ನನ್ನು, ಉಕ್ಬಃ ಇಬ್ನ್ ಅಬೀ ಮುಐತ್‌ನನ್ನು ನೋಡಿಕೋ.” ಪ್ರವಾದಿ(ﷺ)ರು ಏಳನೇ ವ್ಯಕ್ತಿಯನ್ನೂ ಹೆಸರಿಸಿದ್ದರು. ಆದರೆ ಆ ವ್ಯಕ್ತಿಯ ಹೆಸರು ನನಗೆ ಮರೆತುಹೋಗಿದೆ. ನನ್ನ ಆತ್ಮ ಯಾರ ಕೈಯಲ್ಲಿದೆಯೋ ಅವನ ಮೇಲಾಣೆ! ಪ್ರವಾದಿ(ﷺ)ರು ಎಣಿಸಿ ಎಣಿಸಿ ಪ್ರಾರ್ಥಿಸಿದ ಈ ಜನರೆಲ್ಲರೂ ಬದ್ರ್ ಯುದ್ಧದಲ್ಲಿ ಸತ್ತು ಬಿದ್ದಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ.” [ಅಲ್‌ಬುಖಾರಿ 240 ಮತ್ತು ಮುಸ್ಲಿಂ 1794]

ಅನಸ್ ಇಬ್ನ್ ಮಾಲಿಕ್(ರ)ರಿಂದ ವರದಿ: ಒಮ್ಮೆ ಶುಕ್ರವಾರ ದಿನ ಒಬ್ಬ ವ್ಯಕ್ತಿ ಮಿಂಬರಿನ ಎದುರಿನಲ್ಲಿರುವ ಬಾಗಿಲಿನ ಮೂಲಕ ಮಸೀದಿಯೊಳಗೆ ಬಂದರು. ಆಗ ಪ್ರವಾದಿ(ﷺ)ರವರು ಮಿಂಬರಿನಲ್ಲಿ ನಿಂತು ಖುತುಬಃ ನಿರ್ವಹಿಸುತ್ತಿದ್ದರು. ಆ ವ್ಯಕ್ತಿ ಪ್ರವಾದಿ(ﷺ)ರವರ ನೇರ

ಎದುರಿಗೆ ನಿಂತು, “ಓ ಅಲ್ಲಾಹನ ಸಂದೇಶವಾಹಕರೇ! ಮಳೆಯಿಲ್ಲದೆ ಜಾನುವಾರುಗಳು ಸತ್ತುಹೋಗಿವೆ. ದಾರಿಗಳು ಮುಚ್ಚಿಹೋಗಿವೆ. ನಮಗೆ ಮಳೆ ಸುರಿಸುವಂತೆ ಅಲ್ಲಾಹನಲ್ಲಿ ಪ್ರಾರ್ಥಿಸಿರಿ” ಎಂದರು. ಆಗ ಪ್ರವಾದಿ(ﷺ)ರವರು ತಮ್ಮ ಎರಡು ಕೈಗಳನ್ನೆತ್ತಿ

«اللَّهُمَّ اسْقِنَا ، اللَّهُمَّ اسْقِنَا ، اللَّهُمَّ اسْقِنَا»

“ಓ ಅಲ್ಲಾಹ್! ನಮಗೆ ಮಳೆ ಸುರಿಸು. ಓ ಅಲ್ಲಾಹ್! ನಮಗೆ ಮಳೆ ಸುರಿಸು. ಓ ಅಲ್ಲಾಹ್! ನಮಗೆ ಮಳೆ ಸುರಿಸು” ಎಂದು ಪ್ರಾರ್ಥಿಸಿದರು. ಅನಸ್(ؓ)ರವರು ಹೇಳುತ್ತಾರೆ: ಅಲ್ಲಾಹನ ಮೇಲಾಣೆ! ಆಗ ಆ ಸಮಯದಲ್ಲಿ ಆಕಾಶದಲ್ಲಿ ಮೋಡವೋ, ಮೋಡದ ತುಣುಕೋ ಇತರ ಯಾವುದೇ ವಸ್ತುವೋ ಇರಲಿಲ್ಲ. ನಮ್ಮ ಮತ್ತು ಸಲ್ಅ್ ಪರ್ವತದ ಮಧ್ಯೆ ಯಾವುದೇ ಮನೆಯೂ ಇರಲಿಲ್ಲ. ಆಗ ದಿಢೀರನೆ ಪರ್ವತದ ಹಿಂಭಾಗದಿಂದ ಗುರಾಣಿಯಂತಿರುವ ಮೋಡಗಳು ಪ್ರತ್ಯಕ್ಷವಾಗಿ ಮಧ್ಯ ಆಕಾಶಕ್ಕೆ ತಲುಪಿದಾಗ ಅವು ಹರಡಿಕೊಂಡು ಮಳೆ ಸುರಿಸತೊಡಗಿದವು. ಅಲ್ಲಾಹನ ಮೇಲಾಣೆ! ನಾವು ಆರು ದಿನಗಳ ಕಾಲ ಸೂರ್ಯನನ್ನು ನೋಡಿಯೇ ಇಲ್ಲ. ಹೀಗೆ ಮುಂದಿನ ಶುಕ್ರವಾರ ಅದೇ ಬಾಗಿಲಿನ ಮೂಲಕ ಒಬ್ಬ ವ್ಯಕ್ತಿ ಮಸೀದಿಯೊಳಗೆ ಬಂದರು. ಆಗ ಪ್ರವಾದಿ(ﷺ)ರವರು ಮಿಂಬರಿನಲ್ಲಿ ನಿಂತು ಖುತುಬಃ ನಿರ್ವಹಿಸುತ್ತಿದ್ದರು. ಪ್ರವಾದಿ(ﷺ)ರವರ ನೇರ ಎದುರಿಗೆ ಬಂದು ನಿಂತು, “ಓ ಅಲ್ಲಾಹನ ಸಂದೇಶವಾಹಕರೇ! ಮಳೆ ಹೆಚ್ಚಾಗಿ ಸಂಪತ್ತು ನಾಶವಾಗಿವೆ. ದಾರಿಗಳು ಮುಚ್ಚಿಹೋಗಿವೆ. ಮಳೆಯನ್ನು ನಿಲ್ಲಿಸುವಂತೆ ತಾವು ಅಲ್ಲಾಹನಲ್ಲಿ ಪ್ರಾರ್ಥಿಸಿರಿ” ಎಂದು ಆ ವ್ಯಕ್ತಿ ಹೇಳಿದರು. ಆಗ ಪ್ರವಾದಿ(ﷺ)ರವರು ತಮ್ಮ ಎರಡು ಕೈಗಳನ್ನೆತ್ತಿ ಪ್ರಾರ್ಥಿಸುತ್ತಾ

«اللَّهُمَّ حَوَالَيْنَا ، وَلَا عَلَيْنَا ، اللَّهُمَّ عَلَى الْآكَامِ وَالْجِبَالِ وَالظِّرَابِ وَالْأَوْدِيَةِ وَمَنَابِتِ الشَّجَرِ»

“ಓ ಅಲ್ಲಾಹ್! ನಮ್ಮ ಸುತ್ತಮುತ್ತ ಮಳೆ ಸುರಿಸು. ನಮ್ಮ ಮೇಲೆ ಸಾಕು. ಓ ಅಲ್ಲಾಹ್! ಗುಡ್ಡ ದಿಬ್ಬಗಳ ಮೇಲೆ, ಪರ್ವತ ಕಣಿವೆಗಳ ಮೇಲೆ, ತೋಟ ಮರಗಳ ಮೇಲೆ ಮಳೆ ಸುರಿಸು.” ಆಗ ಮಳೆ ಸುರಿಯುವುದು ನಿಂತಿತು. ನಾವು ಮಸೀದಿಯಿಂದ ಹೊರ ಬಂದಾಗ ಬಿಸಿಲು ಆವರಿಸಿಕೊಂಡಿತ್ತು. [ಅಲ್‌ಬುಖಾರಿ 1013 ಮತ್ತು ಮುಸ್ಲಿಂ 897]

11. ಪ್ರಾರ್ಥಿಸುವಾಗ ಕೈಗಳನ್ನು ಎತ್ತುವುದು ಮತ್ತು ಕಿಬ್ಲದ ಕಡೆಗೆ ತಿರುಗುವುದು.

ಅಬೂ ಮೂಸಾ ಅಲ್‌ಅಶ್‌ಅರೀ(ﷺ)ರಿಂದ ವರದಿ: ಪ್ರವಾದಿ(ﷺ)ರವರು ನೀರನ್ನು ತರಿಸಿ ವುದೂ ಮಾಡಿದರು. ನಂತರ ತಮ್ಮ ಕೈಗಳನ್ನೆತ್ತಿ ಪ್ರಾರ್ಥಿಸಿದರು:

«اللَّهُمَّ اغْفِرْ لِعُبَيْدٍ أَبِي عَامِرٍ»

“ಓ ಅಲ್ಲಾಹ್! ಉಬೈದ್ ಅಬೂ ಆಮಿರ್‌ರಿಗೆ ಕ್ಷಮಿಸು.”

ಆಗ ನನಗೆ ಅವರ ಕಂಕುಳದ ಬಿಳುಪು ಕಂಡಿತು. ನಂತರ ಅವರು ಪ್ರಾರ್ಥಿಸಿದರು:

«اللَّهُمَّ اجْعَلْهُ يَوْمَ الْقِيَامَةِ فَوْقَ كَثِيرٍ مِنْ خَلْقِكَ مِنَ النَّاسِ»

“ಓ ಅಲ್ಲಾಹ್! ಪುನರುತ್ಥಾನ ದಿನ ನಿನ್ನ ಇತರೆಲ್ಲ ಸೃಷ್ಟಿಗಳ ಮೇಲೆ ಇವರಿಗೆ ಸ್ಥಾನ ಮಾನ ಕೊಡು.” [ಅಲ್‌ಬುಖಾರಿ 4323 ಮತ್ತು ಮುಸ್ಲಿಂ 2498]

ಉಮರ್ ಇಬ್ನುಲ್ ಖತ್ತಾಬ್(ﷺ)ರಿಂದ ವರದಿ: ಬದ್ರ್ ಯುದ್ಧದ ದಿನ ಅಲ್ಲಾಹನ ಸಂದೇಶವಾಹಕರು(ﷺ) ಮುಶ್ರಿಕ್‌ಗಳ ಕಡೆಗೆ ನೋಡಿದರು. ಅವರು ಸಾವಿರ ಜನರಿದ್ದರು. ಆದರೆ ಅವರ ಸಹಾಬಾಗಳು ಕೇವಲ 313 ಜನರು. ಆಗ ಅಲ್ಲಾಹನ ಪ್ರವಾದಿ(ﷺ)ಯವರು ಕಿಬ್ಲದ ದಿಕ್ಕಿಗೆ ತಿರುಗಿ, ತಮ್ಮ ಕೈಗಳನ್ನು ಚಾಚಿ

«اللَّهُمَّ أَنْجِزْ لِي مَا وَعَدْتَنِي، اللَّهُمَّ آتِ مَا وَعَدْتَنِي، اللَّهُمَّ إِنْ تُهْلِكْ هَذِهِ الْعِصَابَةَ مِنْ أَهْلِ الْإِسْلَامِ لَا تُعْبَدْ فِي الْأَرْضِ»

“ಓ ಅಲ್ಲಾಹ್! ನನಗೆ ವಾಗ್ದಾನ ಮಾಡಿದ್ದನ್ನು ನೆರವೇರಿಸು. ಓ ಅಲ್ಲಾಹ್! ನನಗೆ ವಾಗ್ದಾನ ಮಾಡಿದ್ದನ್ನು ಕೊಡು. ಓ ಅಲ್ಲಾಹ್! ಇಸ್ಲಾಮಿಗೆ ಸೇರಿದ ಈ ಸಣ್ಣ ಗುಂಪನ್ನು ನೀನು ನಾಶ ಮಾಡಿದರೆ ಭೂಮಿಯಲ್ಲಿ ನಿನ್ನನ್ನು ಆರಾಧಿಸಲು ಯಾರೂ ಇರಲಾರರು.” ಎಂದು ಪ್ರಾರ್ಥಿಸತೊಡಗಿದರು.

ಹೀಗೆ ಅವರು ತಮ್ಮ ಕೈಗಳನ್ನು ಚಾಚಿ ಕಿಬ್ಲದೆಡೆಗೆ ತಿರುಗಿ ಪ್ರಾರ್ಥಿಸುತ್ತಲೇ ಇದ್ದರು. ಆಗ ಅವರ ಹೆಗಲಿನಿಂದ ಶಾಲು ಕೆಳಗೆ ಬಿತ್ತು. ಅಬೂ ಬಕರ್(ﷺ)ರವರು ಆ ಶಾಲನ್ನೆತ್ತಿ ಅವರ ಹೆಗಲ ಮೇಲೆ ಹಾಕಿ, ಹಿಂಭಾಗದಿಂದ ಅವರನ್ನು ಅಪ್ಪಿಹಿಡಿದು, “ಓ ಅಲ್ಲಾಹನ ಪ್ರವಾದಿಯವರೇ! ಅಲ್ಲಾಹನೊಡನೆ ತಮ್ಮ ಈ ಸಂಭಾಷಣೆ ಸಾಕು.

ಅವನು ತಮಗೆ ನೀಡಿದ ವಾಗ್ದಾನವನ್ನು ಖಂಡಿತ ನೆರವೇರಿಸುವನು" ಎಂದರು. ಆಗ ಅಲ್ಲಾಹು ಈ ಸೂಕ್ತಿಯನ್ನು ಅವತೀರ್ಣಗೊಳಿಸಿದನು:

﴿إِذۡ تَسۡتَغِيثُونَ رَبَّكُمۡ فَٱسۡتَجَابَ لَكُمۡ أَنِّي مُمِدُّكُم بِأَلۡفٖ مِّنَ ٱلۡمَلَٰٓئِكَةِ مُرۡدِفِينَ ٩﴾ [الأنفال: 9].

"ನೀವು ನಿಮ್ಮ ರಬ್ಬಿನೊಂದಿಗೆ ಸಹಾಯ ಕೇಳಿದಾಗ, ನಿರಂತರವಾಗಿ ಬರುವ ಒಂದು ಸಾವಿರ ಮಲಕ್‌ಗಳ ಮೂಲಕ ನಾನು ನಿಮಗೆ ಸಹಾಯ ಮಾಡುವೆನು ಎಂದು ಅವನು ನಿಮಗೆ ಉತ್ತರ ನೀಡಿದ ಸಂದರ್ಭವನ್ನು ಸ್ಮರಿಸಿರಿ." [ಕುರ್‌ಆನ್ 8:9] ಹೀಗೆ ಅಲ್ಲಾಹು ಮಲಕ್‌ಗಳ ಮೂಲಕ ಸಹಾಯ ಮಾಡಿದನು.

ಅನಸ್(ﷺ)ರಿಂದ ವರದಿ: ಅಲ್ಲಾಹನ ಸಂದೇಶವಾಹಕರು(ﷺ) ತಮ್ಮ ಯಾವುದೇ ಪ್ರಾರ್ಥನೆಯಲ್ಲೂ ಕೈಯೆತ್ತಿ ಪ್ರಾರ್ಥಿಸುತ್ತಿರಲಿಲ್ಲ. ಆದರೆ ಮಳೆಯನ್ನು ಬೇಡುವ ಪ್ರಾರ್ಥನೆಯಲ್ಲಿ ಹೊರತು. ಈ ಪ್ರಾರ್ಥನೆಯಲ್ಲಿ ಅವರು ತಮ್ಮ ಕಂಕುಳದ ಬಿಳುಪು ಕಾಣುವ ತನಕ ಕೈಯೆತ್ತುತ್ತಿದ್ದರು. [ಮುಸ್ಲಿಂ 896] ಅಂದರೆ ಪ್ರವಾದಿ(ﷺ)ರವರು ಮಳೆಗಾಗಿ ಬೇಡುವಾಗ ಅತಿಯಾಗಿ ಕೈಯೆತ್ತುತ್ತಿದ್ದಂತೆ ಇತರ ಪ್ರಾರ್ಥನೆಗಳಲ್ಲಿ ಕೈಯೆತ್ತುತ್ತಿರಲಿಲ್ಲ ಎಂದರ್ಥ.

ಅಲ್ಲಾಹನ ಸಂದೇಶವಾಹಕರು(ﷺ) ಹೇಳಿದರು:

«إِنَّ اللَّهَ حَيِيٌّ كَرِيمٌ ، يَسْتَحْيِي إِذَا رَفَعَ الرَّجُلُ إِلَيْهِ يَدَيْهِ، أَنْ يَرُدَّهُمَا صِفْرًا خَائِبَتَيْنِ»

“ಖಂಡಿತವಾಗಿಯೂ ಅಲ್ಲಾಹು ಅತ್ಯಧಿಕ ನಾಚಿಕೆಯುಳ್ಳವನು ಮತ್ತು ಅತ್ಯುದಾರಿ. ಒಬ್ಬ ವ್ಯಕ್ತಿ ಅವನ ಕಡೆಗೆ ಕೈಯೆತ್ತಿ ಪ್ರಾರ್ಥಿಸಿದರೆ ಆ ಎರಡು ಕೈಗಳನ್ನು ಏನೂ ನೀಡದೆ ಬರಿದಾಗಿ ಹಿಂದಿರುಗಿಸಲು ಅವನು ನಾಚುತ್ತಾನೆ.” [ಅಹ್ಮದ್ 5/438; ಅಬೂ ದಾವೂದ್ 1488; ಅತ್ತಿರ್ಮಿದೀ 3551]

12. ಅಲ್ಲಾಹನನ್ನು ಸ್ಮರಿಸುವ ಸ್ಥಳ ಶುದ್ಧವೂ ಜನರ ಗದ್ದಲಗಳಿಂದ ಮುಕ್ತವೂ ಆಗಿರಬೇಕು. ಇದು ಅಲ್ಲಾಹನ ಬಗ್ಗೆ ಹೃದಯದಲ್ಲಿ ಭಯ ಭಕ್ತಿ ಮೂಡಲು ಸಹಕಾರಿ. ಈ ಕಾರಣದಿಂದಲೇ ಮಸೀದಿಗಳಲ್ಲಿ ಝಿಕ್ರ್ ಹೇಳುವುದನ್ನು ಪ್ರಶಂಸಿಸಲಾಗಿದೆ.

ಅಬೂ ಮೈಸರಃ(ﷺ) ಹೇಳುತ್ತಾರೆ:

«لَا يُذْكَرُ اللَّهُ تَعَالَى إِلَّا فِي مَكَانٍ طَيِّبٍ»

“ಶುದ್ಧವಾದ ಸ್ಥಳದಲ್ಲಲ್ಲದೆ ಅಲ್ಲಾಹನನ್ನು ಸ್ಮರಿಸಬಾರದು.”

13. ಬಾಯಿ ಶುದ್ಧವಾಗಿರಬೇಕು. ಬಾಯಿಯಲ್ಲಿ ವಾಸನೆಯಿದ್ದರೆ ಮಿಸ್ವಾಕ್ ಮೂಲಕ ಅದನ್ನು ಶುದ್ಧ ಮಾಡಿ ಬಾಯನ್ನು ತೊಳೆಯಬೇಕು.

14. ಎಲ್ಲ ಸಮಯಗಳಲ್ಲೂ ಝಿಕ್ರ್ ಹೇಳುವುದು ಪ್ರಶಂಸನೀಯ. ಆದರೆ ಝಿಕ್ರ್ ಹೇಳಬಾರದೆಂದು ಶರೀಅತ್ತಿನಲ್ಲಿ ಹೇಳಲಾದ ಸಮಯಗಳ ಹೊರತು. ಉದಾ: ಶೌಚಾಲಯದಲ್ಲಿರುವಾಗ, ಸಂಭೋಗ ಮಾಡುತ್ತಿರುವಾಗ, ಖುತುಬ ನಿರ್ವಹಿಸುತ್ತಿರುವಾಗ ಮತ್ತು ಕೇಳುತ್ತಿರುವಾಗ, ನಮಾಝಿನಲ್ಲಿ ನಿಂತಿರುವಾಗ (ಕುರ್‌ಆನ್ ಪಾರಾಯಣ ಮಾಡುತ್ತಿರುವಾಗ) ಇತ್ಯಾದಿ.

15. ಝಿಕ್ರ್ ಹೇಳುತ್ತಿರುವಾಗ (ಪ್ರಾರ್ಥಿಸುತ್ತಿರುವಾಗ) ಯಾರಾದರೂ ಸಲಾಂ ಹೇಳಿದರೆ ಸಲಾಂಗೆ ಉತ್ತರಿಸಿ ಝಿಕ್ರ್ ಹೇಳುವುದನ್ನು ಮುಂದುವರಿಸಬೇಕು. ಯಾರಾದರೂ ಸೀನಿದ ಬಳಿಕ ಅಲ್‌ಹಂದುಲಿಲ್ಲಾಹ್ ಹೇಳಿದರೆ, ಯರ್ಹಮುಕಲ್ಲಾಹು ಎಂದು ಹೇಳಿ ಝಿಕ್ರ್ ಹೇಳುವುದನ್ನು ಮುಂದುವರಿಸಬೇಕು. ಅಝಾನ್ ಕರೆ ಕೇಳುವಾಗ ಆ ಕರೆಗೆ ಉತ್ತರಿಸಿ ನಂತರ ಝಿಕ್ರ್ ಹೇಳುವುದನ್ನು ಮುಂದುವರಿಸಬೇಕು. ದುರಾಚಾರವನ್ನು ಕಂಡರೆ ಅದನ್ನು ನಿವಾರಿಸಿ, ಸದಾಚಾರ ಬೋಧಿಸಬೇಕಾಗಿ ಬಂದರೆ ಅದನ್ನು ಬೋಧಿಸಿ, ಯಾರಾದರೂ ಸಲಹೆ ಕೇಳಿದರೆ ಅವರಿಗೆ ಸಲಹೆ ನೀಡಿ ನಂತರ ಝಿಕ್ರ್ ಹೇಳುವುದರ ಕಡೆಗೆ ಮರಳಬೇಕು. ಹೀಗೆ ಝಿಕ್ರ್ ಹೇಳುವುದು ಒಳಿತಿನ ಕಾರ್ಯಗಳಿಗೆ ತಡೆಯಾಗಿ ಪರಿಣಮಿಸಬಾರದು.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********

# ಒಳಪುಟಗಳಲ್ಲಿ


| م | العنوان | الصفحة |
|---|---|---|
| 1 | ಪ್ರಾರ್ಥನೆಯ ಶಿಷ್ಟಾಚಾರಗಳು | **1** |
| 2 | ಒಂದನೇ ಶಿಷ್ಟಾಚಾರ | **1** |
| 3 | ಎರಡನೇ ಶಿಷ್ಟಾಚಾರ | **7** |
| 4 | ಮೂರನೇ ಶಿಷ್ಟಾಚಾರ | **7** |
| 5 | ನಾಲ್ಕನೇ ಶಿಷ್ಟಾಚಾರ | **8** |
| 6 | ಐದನೇ ಶಿಷ್ಟಾಚಾರ | **9** |
| 7 | ಆರನೇ ಶಿಷ್ಟಾಚಾರ | **9** |
| 8 | ಏಳನೇ ಶಿಷ್ಟಾಚಾರ | **10** |
| 9 | ಎಂಟನೇ ಶಿಷ್ಟಾಚಾರ | **10** |
| 10 | ಒಂಬತ್ತನೇ ಶಿಷ್ಟಾಚಾರ | **11** |
| 11 | ಹತ್ತನೇ ಶಿಷ್ಟಾಚಾರ | **12** |
| 12 | ಹನ್ನೊಂದನೇ ಶಿಷ್ಟಾಚಾರ | **15** |
| 13 | ಹನ್ನೆರಡನೇ ಶಿಷ್ಟಾಚಾರ | **18** |
| 14 | ಹದಿಮೂರನೇ ಶಿಷ್ಟಾಚಾರ | **18** |
| 15 | ಹದಿನಾಲ್ಕನೇ ಶಿಷ್ಟಾಚಾರ | **18** |
| 16 | ಹದಿನೈದನೇ ಶಿಷ್ಟಾಚಾರ | **19** |

IslamHouse.com